**<u>ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಇಂಡಿ</u>**

**ಸಿಸಿ. ನಂ:2633/2019**

**ಪಿ.ಡಬ್ಲ್ಯು- 1**

**ದಿ:14-10-2025 ರ ಮೇರೆಗೆ ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಪಾಟೀ ಸವಾಲುಃ ಶ್ರೀ. ಕೆ.ಐ.ಜೆ. ಆರೋಪಿ ಪರ ವಕೀಲರಿಂದಃ</u>**

ನಿಮಗೆ 4 ಲಕ್ಷ ವಾರ್ಷಿಕ ಆದಾಯ ಇರುತ್ತದೆ ಎಂದು ತೋರಿಸಲು ನ್ಯಾಯಾಲಯಕ್ಕೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸಾಕ್ಷಿಯು ಆರೋಪಿಯು ಚೆಕ್ಕನ್ನು ನೀಡಿರುತ್ತಾರೆ ಅದನ್ನು ನ್ಯಾಯಾಯಲಯಕ್ಕೆ ನೀಡಿರುತ್ತೇನೆ ಎಂದು ನುಡಿಯುತ್ತಾರೆ. ನಾನು DCC Bank ಚಡಚಣ ಮತ್ತು Canera Bank ದೇವರನಿಂಬರಗಿಯಲ್ಲಿ ಬ್ಯಾಂಕ್ ಖಾತೆಯನ್ನು ಹೊಂದಿರುತ್ತೇನೆ. ನಾನು ಆರೋಪಿಗೆ ಹಣವನ್ನು ಕೊಟ್ಟಿರುತ್ತೇನೆ ಎಂದು ಹೇಳುತ್ತಿರುವ ಕಾಲದಲ್ಲಿ ನನ್ನ ಬ್ಯಾಂಕ್ ಖಾತೆಯಲ್ಲಿ ಪಿರ್ಯಾದಿಯು ತೋರಿಸಿರುವ ದೊಡ್ಡ ಮೊತ್ತದ ಬಗ್ಗೆ ವ್ಯವಹಾರ ಆಗಿಲ್ಲ ಎಂದರೆ ಸರಿಯಲ್ಲ.

ನಾನು 9,85,000/- ರೂ.ಗಳನ್ನು ಆರೋಪಿಗೆ ಕೊಡುವಾಗ ಭದ್ರತೆಗಾಗಿ ಯಾವುದೇ ದಾಖಲೆಗಳನ್ನು ಬರೆಸಿಕೊಂಡಿಲ್ಲ. ನಮ್ಮ ಬಿಗರು ಆದ ಬಸವರಾಜ ಜಲಪುರೆ ಇವರು ಆರೋಪಿ ಕಡೆಯಿಂದ ಹಣವನ್ನು ನೀಡುವಾಗ ಭದ್ರತೆಗಾಗಿ ಯಾವುದೇ ಕಾಗದವನ್ನು ಬರೆಸಿಕೊಳ್ಳುವಂತೆ ನನಗೆ ಹೇಳಿಲ್ಲ. ನಾನು ಹೊಲವನ್ನು ಮಾರಾಟ ಮಾಡಿ ಆರೋಪಿಗೆ ಹಣವನ್ನು ನೀಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನಿ.ಪಿ.4 ರಲ್ಲಿ, ನನ್ನ ಸಾಕ್ಷ್ಯಾಪ್ರಮಾಣ ಪತ್ರಿಕೆಯಲ್ಲಿ ಹಾಗೂ ಪಿರ್ಯಾದಿಯಲ್ಲಿ ಹೊಲವನ್ನು ಮಾರಾಟ ಮಾಡಿ ಆರೋಪಿಗೆ ಹಣವನ್ನು ನೀಡಿರುತ್ತೇನೆ ಎಂದು ಬರೆಸಿಲ್ಲ ಎಂದರೆ ಸರಿ. DCC Bank ನಿಂದ ಹಣವನ್ನು ತೆಗೆದುಕೊಂಡು ಬಂದು ಆರೋಪಿಗೆ ನೀಡಿರುತ್ತೇನೆ ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ.

ನಮ್ಮ ಕುಟುಂಬದಲ್ಲಿ 3 ಜನ ಇರುತ್ತೇವೆ. ನನಗೆ ಪಡೀತರ ಚೀಟಿ ಇರುತ್ತದೆ. ನನಗೆ BPL ಕಾರ್ಡ ಇರುತ್ತದೆ. ನಾನು ಆದಾಯ ತೆರಿಗೆ ತುಂಬುವುದಿಲ್ಲ. ನಿ.ಪಿ.1 ರಲ್ಲಿ ಬರೆದಿರುವ ಹೆಸರು, ಹಣ ಮತ್ತು ಸಹಿ ಬೇರೆ ಬೇರೆ ಇರುತ್ತವೆ ಎಂದರೆ ಸರಿಯಲ್ಲ. ನಾನು ನಿ.ಪಿ.1 ನ್ನು ನಗಧಿಕರಣಕ್ಕಾಗಿ ಯಾವಾಗ ಹಾಜರುಪಡಿಸಿರುತ್ತೇನೆ ಎಂದು ನನಗೆ ಹೇಳಲು ಬರುವುದಿಲ್ಲ. ನಿ.ಪಿ.2 ನ್ನು ಯಾವಾಗ ಕೊಟ್ಟಿರುತ್ತಾರೆ ಎಂದು ಹೇಳಲು ಬರುತ್ತದೆಯೇ ಎನ್ನುವ ಪ್ರಶ್ನೆಗೆ ಸಾಕ್ಷಿಯು ಎಲ್ಲಾ ಪಾಸಬುಕನಲ್ಲಿ ಇದೆ ಎಂದು ನುಡಿಯುತ್ತಾರೆ.

ವಕೀಲರ ಮುಖಾಂತರ ನೀಡಿದ ನೋಟಿಸು ಆರೋಪಿಗೆ ಯಾವಾಗ ಮುಟ್ಟಿರುತ್ತದೆ ಎಂದು ನನಗೆ ಹೇಳಲು ಬರುವುದಿಲ್ಲ. ಕಾಯಿದೆ ಪ್ರಕಾರ ಪಿರ್ಯಾದಿಯಲ್ಲಿ ನಮೂದು ಮಾಡಿರುವ ವ್ಯಾಜ್ಯ ಕಾರಣವು ಉರ್ಜಿತವಾಗುವುದಿಲ್ಲ ಎಂದರೆ ಸರಿಯಲ್ಲ. ಬಸವರಾಜ ಜಲಪುರೆ ಇವರ ಅಣ್ಣನಿಗೆ ನಮ್ಮ ಅಣ್ಣನ ಮಗಳನ್ನು ಮದುವೆ ಮಾಡಿರುತ್ತೇವೆ. ಬಾಪುರಾಯ ಸಿದ್ದಾಪುರ ಇವರು ನನಗೆ ಸಂಬಂಧವಿಲ್ಲ. ಬಸವರಾಜ ಜಲಪುರೆ ಮತ್ತು ಬಾಪುರಾಯ ಸಿದ್ದಾಪುರ ಇವರು ಇಂಡಿ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸು ಎಂದು 2 ಚೆಕ್ ಕೊಟ್ಟಿರುತ್ತಾರೆ ಎಂದರೆ ಸರಿ. ನಾನು ಆರೋಪಿಗೆ ಯಾವುದೇ ಹಣವನ್ನು ನೀಡದೇ ಇದ್ದರು ಸಹ ಬಸವರಾಜ ಜಲಪುರೆ ಇವರ ಮಾತು ಕೇಳಿ ಖೊಟ್ಟಿ ಕೇಸು ದಾಖಲಿಸಿರುತ್ತೇನೆ ಎಂದರೆ ಸರಿ. ನಾನು ಆರೋಪಿಗೆ 9,85,000/- ರೂ.ಗಳನ್ನು ಕೊಡುವಷ್ಟು ಆರ್ಥಿಕ ಸಾಮರ್ಥ್ಯ ಹೊಂದಿಲ್ಲ ಎಂದರೆ ಸರಿಯಲ್ಲ. ಆರೋಪಿಯು ಸೆಪ್ಟೆಂಬರ್ 2018 ರಲ್ಲಿ ಹಣವನ್ನು ಕೇಳಿದ್ದು ನಾನು ಆತನಿಗೆ 9,85,000/- ರೂ.ಗಳನ್ನು ನೀಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯು ನನಗೆ ನಿ.ಪಿ.1 ಚೆಕ್ಕನ್ನು ನೀಡಿರುತ್ತಾನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲಃ**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)

**ಓ.ಹೇ.ಕೇ. ಸರಿ ಇದೆ.**

**ಸಹಿ/-**

**ಸಿವಿಲ್ ಜಡ್ಜ್ ಮತ್ತು ಜೆ.ಎಮ್.ಎಫ್.ಸಿ.ಇಂಡಿ.**